ಕೊಂಡ್ಹೋಗಿ ಕಡುಬು, ಪತ್ರೊಡೆ ಎಲ್ಲ ಮಾಡ್ತಾ ಇದ್ರು.

ನಾನು ಯಾವಾಗ್ಲೂ ಹೇಳ್ತಾ ಇರ್ತೇನೆ: ನನ್ನ ತಂದೆ ನಮ್ಮ ಮನೆಯನ್ನು ಹೀಗೆ ಬಹುಧರ್ಮೀಯರು ಇರುವಂಥ ಏರಿಯಾದಲ್ಲಿ ಮಾಡುವ ಬದಲಿಗೆ ಮುಸ್ಲಿಂ ಕೇರಿಯಲ್ಲಿ ಮಾಡ್ತಿದ್ರೆ, ಬಹುಶಃ ಇಂಥ ಅನುಭವಗಳು ಬರ್ತಾ ಇರಲಿಲ್ಲ. ಎಲ್ಲೋ ನಾಯಿಗಳಿಗೆ ಕಲ್ಲು ಹೊಡೆಯುತ್ತ, ಸಣ್ಣಪುಟ್ಟ ಆಟ ಆಡಿಕೊಂಡು ಬೆಳೆದುಬಿಡ್ತಿದ್ದೆನೇ ಹೊರತು ಇಂಥ ವಿಶಾಲವಾದ ಅನುಭವ ಸಿಕ್ತಿರ್ಲಿಲ್ಲ. ಪರಮತದವರು, ಪರಜಾತಿಯ ಜನರು ಹೇಗೆ ಬದುಕ್ತಾರೆ ಅನ್ನೋದು ನನಗೆ ಗೊತ್ತಾಗ್ತಾ ಇರ್ಲಿಲ್ಲ. ಹೆಚ್ಚಿನ ಮುಸ್ಲಿಮರಿಗೆ ಹಿಂದೂಗಳು ಬದುಕುವಂಥ ರೀತಿ ಗೊತ್ತಿರೋದಿಲ್ಲ. ಹಾಗೆಯೇ ಹಿಂದೂಗಳಿಗೂ ಮುಸ್ಲಿಮರು ಹೇಗೆ ಬದುಕ್ತಾರೆ ಎನ್ನುವುದು ಗೊತ್ತಿರೋದಿಲ್ಲ. ಆ ಕುತೂಹಲ ಕೂಡ ಇರೋದಿಲ್ಲ.

ಐದನೇ ಕ್ಲಾಸಿನ ನಂತರ ನಾನು ಉರ್ದು ಶಾಲೆಯಿಂದ ಪೇಟೆ ಶಾಲೆಗೆ ಹೋದೆ. ಆಗ ನನ್ನ ವಿಚಾರಗಳೆಲ್ಲ ಬಹಳ ಗೊಂದಲಕ್ಕೆ ಒಳಗಾಗಿಬಿಡ್ತು. ಬಹುಶಃ ಉರ್ದು ಶಾಲೆಯಲ್ಲಿ ಕಲಿತವರಲ್ಲಿ ಎರಡೋ ಮೂರೋ ಮಂದಿ ಮಾತ್ರ ಪೇಟೆ ಶಾಲೆಗೆ ಹೋಗುವಂಥ ಅವಕಾಶ ಸಿಕ್ಕಿತ್ತು. ಆರನೇ ಕ್ಲಾಸಿಗೆ ಎಸ್‌ವಿಎಸ್ ಹೈಯರ್ ಸೆಕೆಂಡರಿ ಸ್ಕೂಲ್‌ಗೆ ಹೋಗಿ ಸೇರಿಕೊಂಡೆ. ಅಲ್ಲಿ ಆದ ಅನುಭವ ಅದುವರೆಗಿನ ನನ್ನ ಅನುಭವಕ್ಕಿಂತ ತುಂಬ ವಿಚಿತ್ರವೂ ಭಿನ್ನವೂ ಆಗಿತ್ತು. ಅಲ್ಲಿ ಮೇಲ್ಜಾತಿಯ ಹುಡುಗರೇ ಜಾಸ್ತಿ ಇದ್ದರು. ಕೆಳಜಾತಿ ಹುಡುಗರ ಸಂಖ್ಯೆ ಬಹಳ ಕಮ್ಮಿ. ಒಬ್ಬ ಟೀಚರ್ ಮುಸ್ಲಿಂ ಇದ್ರು. ಮತ್ತೆಲ್ಲರೂ ಬ್ರಾಹ್ಮಿನ್ಸ್ ಮತ್ತೆ ಶೆಟ್ಟಿಗಳು. ಅಲ್ಲಿ ಜಾತಿಯ ಭಾವನೆಗಳು ಬಹಳ ಪ್ರಖರವಾಗಿ ಕಾಣ್ತಾ ಇತ್ತು. ನನ್ನನ್ನು 'ಬ್ಯಾರಿ' ಎಂದೇ ಕರೀತಿದ್ರು. ಉಳಿದವರನ್ನು ಜಾತಿ ಸೂಚಕವಾಗಿ ಕರೀತಿದ್ರು. ಮಕ್ಕಳೂ ಕೂಡ 'ನಮ್ಮದು ಐದಾರು ಜಾತಿ ಇವೆ. ನಿಮ್ಮದು ಆರನೇಯದ್ದು ಅಥವಾ ಏಳನೆಯದ್ದು. ನೀವು ದನ ತಿನ್ನುವವರು. ಕೊಳಕು ಜಾತಿ ನಿಮ್ಮದು. ದೂರ ಕೂತ್ಕೊ' ಎಂದೆಲ್ಲ ಕಿರಿಕಿರಿ ಮಾಡ್ತಾ ಇದ್ರು. ನನಗೆ ಅದು ಹೊಸ ಅನುಭವ. ಯಾಕೆಂದರೆ ನಾನು ಬ್ಯಾರಿ ಅಥವಾ ಮುಸ್ಲಿಂ ಅಂತ್ಹೇಳಿ ನನಗೆ ಗೊತ್ತಾದದ್ದು ಶಾಲೆಗೆ ಹೋದ ನಂತರ. ಅಲ್ಲಿವರೆಗೆ ಅವೆಲ್ಲ ಮುಖ್ಯ ಅಂತಲೇ ಅನಿಸಿರಲಿಲ್ಲ. ಯಾಕೆಂದರೆ ನಮ್ಮ ಊರಿನಲ್ಲಿಯೆಲ್ಲ ಯಾರ ಮಗ/ಮಗಳು ಎಂದು ಸಂಬೋಧಿಸುತ್ತಿದ್ದರೇ ಹೊರತು ಜಾತಿ, ಧರ್ಮದ ಹೆಸರಿನಿಂದ ಗುರ್ತಿಸುತ್ತಿರಲಿಲ್ಲ. ಅವರಿಗೆ ಅದರ ಅಗತ್ಯವೂ ಇರಲಿಲ್ಲ. ಆದರೆ ಈ ಶಾಲೆಯಲ್ಲಿ ಅದು ಬಹಳ ಅಗತ್ಯದ ಹಾಗೆ ಕಾಣ್ತಾ ಇತ್ತು.

ಲಕ್ಷ್ಮೀನಾರಾಯಣ ಅಂತ ಒಬ್ಬ ಹುಡುಗ ಇದ್ದ. ಅವನು ಮುಖದಲ್ಲಿ ಶಂಖ, ಚಕ್ರ ಎಲ್ಲ ಹಾಕ್ಕೊಂಡು, ಬೆಳಿಗ್ಗೆ ಪೂಜೆ ಎಲ್ಲ ಮಾಡಿಕೊಂಡು ಬರುವ ಹುಡುಗ. ಅವನು ಓದ್ದೋದ್ರಲ್ಲಿ ಬಹಳ ಹುಶಾರು. ಒಮ್ಮೆ ಅವನು ಕೀಟಲೆ ಮಾಡುತ್ತ ನನ್ನನ್ನು ತುಳಿದ. ನನ್ನದು ಬಿಳೀ ಶರ್ಟು. ಬಿಳೀ ಶರ್ಟಿನ ಮೇಲೆ ಅವನ ಚಪ್ಪಲಿನ ಗುರ್ತು ಸೀದಾ ಆಗಿತ್ತು. ಆಗ ಮತ್ತೊಬ್ಬ ಹುಡುಗ ನನ್ನನ್ನು ಕರ್ಕೊಂಡು ಹೆಡ್ಮಾಸ್ಟ್ರ ರೂಮಿಗೆ ಹೋದ. ಅವರು ನೋಡಿದ್ರು. 'ಏನ್ ಏನಾಯ್ತು?' ಕೇಳಿದ್ರು. ನಾನು 'ಲಕ್ಷ್ಮೀನಾರಾಯಣ ನನ್ನ ತುಳ್ದ' ಅಂತ ಹೇಳ್ದೆ. ಅದಕ್ಕೆ ಅವರು – 'ಅವ್ನು ಹುಶಾರಿ ಹುಡುಗ; ನೀನ್ ಹೋಗ್' ಎಂದು ಕಳಿಸಿಬಿಟ್ಟರು. ಈ ಥರದ ಅನುಭವಗಳೆಲ್ಲ ಆ ಶಾಲೆಯಲ್ಲಿ ಆಗ್ತಾ ಇತ್ತು.

ನಾನು ಏಳನೇ ಕ್ಲಾಸಿನಲ್ಲಿದ್ದಾಗ ನಡೆದ ಇನ್ನೊಂದು ಘಟನೆ ನಂಗೆ ಮರೆಯಲಿಕ್ಕೇ ಸಾಧ್ಯ ಇಲ್ಲ. ಒಬ್ಬ ಮೇಲ್ಜಾತಿ ಮೇಸ್ಟ್ರು ಕನ್ನಡ ಪಾಠ ಮಾಡ್ತಾ ಇದ್ರು. ಅವರು ಒಮ್ಮೆ ಪ್ರಬಂಧ ಬರೆದು ತರಲಿಕ್ಕೆ ಹೇಳಿದ್ರು ರಜೆಯಲ್ಲಿ. ಆ ರಜೆಯಲ್ಲಿ ನಾನು ಬಾರ್ಕೂರಿಗೆ – ನನ್ನ ತಾಯಿ ಮನೆಗೆ ಹೋಗಿದ್ದೆ. ಅಲ್ಲಿ ಆದಂಥ ಅನುಭವಗಳನ್ನು ಪ್ರಬಂಧವಾಗಿ ಬರೆದುಕೊಂಡು ಬಂದಿದ್ದೆ. ಬಹುಶಃ ನಾನು ಬರೆದ